**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ಬೇಲೂರು.**
**ಸಿಸಿ ನಂ.88/2018**

| | | |
|---|---|---|
| **ಹೆಸರು** | ವೆಂಕಟೇಶ್ ಹೆಚ್ ಕೆ | **ದಿಃ 10-11-2023** |
| **ತಂದೆ ಹೆಸರು** | ಕೃಷ್ಣೇಗೌಡ ಹೆಚ್ ಕೆ | |
| **ವಯಸ್ಸು** | 48 ವರ್ಷ | **ಪಿಡಬ್ಲ್ಯೂಃ 4** |
| **ಉದ್ಯೋಗ** | ಅಬಕಾರಿ ನಿರೀಕ್ಷಕರು, ಸಕಲೇಶಪುರ ವಲಯ | **ಸಿಡಬ್ಲ್ಯೂಃ 6** |
| **ವಾಸ** | ಸಕಲೇಶಪುರ | **ವಿಧಿ ಬದ್ದವಾಗಿ ಪ್ರಮಾಣೀಕರಿಸಲಾಯ್ತು.** |

**ಮುಖ್ಯ ವಿಚಾರಣೆ ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

**ನಾನು** ಆಗಸ್ಟ್ 2017 **ರಿಂದ** ಜನವರಿ 2018 ರ ವರೆಗೆ ಬೇಲೂರು ವಲಯದಲ್ಲಿ ಅಬಕಾರಿ ಉಪ ನಿರೀಕ್ಷಕನಾಗಿ **ಕರ್ತವ್ಯ** ನಿರ್ವಹಿಸಿರುತ್ತೇನೆ.

ದಿಃ15-10-2017 ರಂದು ಅಬಕಾರಿ ನಿರೀಕ್ಷಕರಾಗಿದ್ದ ಶ್ರೀ ಎಂ ಕೆ ಕೇಶವಮೂರ್ತಿ ರವರಿಂದ ಈ ಪ್ರಕರಣದ ಕಡತವನ್ನು ಪಡೆದಿರುತ್ತೇನೆ. ದಿಃ16-10-2017 ರಂದು ರಾಸಾಯಿನಿಕ ವರಿದಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತೇನೆ. ದಿಃ09-11-2017 ರಂದು ನಾರಾಯಣಪುರ ಗ್ರಾಮ ಪಂಚಾಯಿತಿ ರವರಿಂದ ಮಾಲೀಕತ್ವದ ವಿವರದ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ05-12-2017 ರಂದು ಆರೋಪಿಯ ವಿರುದ್ದ ಆರೋಪ ಸಾಬೀತಾದ ಕಾರಣ ಅಂತಿಮ ದೋಷರೋಪಣ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ರಾಸಾಯಿನಿಕ ವಿಶ್ಲೇಷಣ ವರದಿಯನ್ನು ನಿಪಿ-3 ಎಂದು ಗುರುತಿಸಲಾಯಿತು. ವಾಸದ ಮನೆಯ ಮಾಲೀಕತ್ವ ವಿವರದ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ನಿಪಿ-4 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಬಿ ಎಸ್ ಜಿ ರವರಿಂದ**

ಶ್ರೀ ಎಂ ಕೆ ಕೇಶವಮೂರ್ತಿರವರಿಂದ ನಾನು ಕಡತವನ್ನು ಪಡೆದಿದ್ದು ಸದರಿಯವರನ್ನು ಈ ಪ್ರಕರಣದಲ್ಲಿ ಸಾಕ್ಷಿಯನ್ನಾಗಿ ಮಾಡಿರುವುದಿಲ್ಲ. ಸದರಿಯವರು ನನಗೆ ಕಡತ ಕೊಟ್ಟ ಬಗ್ಗೆ ಮತ್ತು ನಾನು ಸ್ವೀಕರಿಸಿದ ಬಗ್ಗೆ ಯಾವುದೇ ಸಹಿ ಇರುವುದಿಲ್ಲ. ನಾವು ಕೇಳಿದ ವಿವರಗಳಿಗೆ ರಾಸಾಯಿನಿಕ ವರದಿಯಲ್ಲಿ ಉತ್ತರ ನೀಡಿರುತ್ತಾರೆ. ರಾಸಾಯಿನಿಕ ವರದಿಗಾಗಿ ಮಾದರಿ ಕಳುಹಿಸಲು 4 ತಿಂಗಳ ತಡವಾಗಿದ್ದು ಯಾಕೆ ಎಂದು ಕಾರಣಗಳನ್ನು ಬರೆದಿರುವುದಿಲ್ಲ. ಒಬ್ಬ ವ್ಯಕ್ತಿ ಒಂದು ಮನೆಯಲ್ಲಿ ವಾಸವಿರುತ್ತಾನೆ ಎಂದರೆ ಅದಕ್ಕೆ ಸಂಬಂಧಿಸಿದ ದಾಖಲೆಗಳು ಇರುತ್ತದೆ ಎಂದರೆ ಸರಿ. ಸದರಿ ವಾಸದ ದೃಢೀಕರಣದ ಪ್ರತಿ ನಾವು ಗುರುತಿನ ಪತ್ರಗಳನ್ನು ಪಡೆದಿರುವುದಿಲ್ಲ. ಆರೋಪಿ ಹಲ್ಮಿಡಿ ಗ್ರಾಮದಲ್ಲಿ ವಾಸವಿರುತ್ತಾರೆ ಎಂಬುದರ ಬಗ್ಗೆ ಗ್ರಾಮ

ಪಂಚಾಯಿತಿಯಲ್ಲಿ ದಾಖಲಾತಿಗಳು ಇರುವುದಿಲ್ಲ. ಆರೋಪಿ ಹಲ್ಮಿಡಿ ಗ್ರಾಮದಲ್ಲಿ ವಾಸ ಇರದ ಕಾರಣ ದಾಖಲಾತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ-**4** ರ ಮಾಲೀಕತ್ವ ವಿವರದ ಪತ್ರವನ್ನು ಹಾಗೂ ನಿಪಿ-**3** ರ ರಾಸಾಯಿನಿಕ ವರಿದಿಯನ್ನು ಸ್ವೀಕರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸೂಕ್ತ ತನಿಖೆ ಮಾಡದೆ ಆರೋಪಿತರ ವಿರುದ್ದ ದೋಷಪೂರಿತ ದೋಷರೋಪಣ ಪಟ್ಟಿಯನ್ನು ಇಲಾಖಾ ಅಂಕಿ ಅಂಶಗಳಿಗೋಸ್ಕರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ. ಸರಿ. ಇದೆ**

**(ಪ್ರಸನ್ನಕುಮಾರ್ ಸಿ.)**
**ಸಿವಿಲ್ ನ್ಯಾಯಾಧೀಶರು ಹಾಗೂ**
**ಜೆ.ಎಂ.ಎಫ್.ಸಿ. ಬೇಲೂರು.**